ವಿಜಯ ಕರ್ನಾಟಕ

## ಸಿಟಿಲೈಟ್ಸ್

# ಗರ್ಭಿಣಿಯರ ಮಾಹಿತಿ ಸಂಗ್ರಹಕ್ಕೆ ಆ್ಯಪ್ ಅಭಿವೃದ್ಧಿ

**ಬೆಂಗಳೂರು:** ಗ್ರಾಮೀಣ ಭಾಗದಲ್ಲಿ ನವಜಾತ ಶಿಶುಗಳ ಬೆಳವಣಿಗೆ ಹಾಗೂ ಗರ್ಭಿಣಿಯರ ಕುರಿತು ಆಶಾ ಕಾರ್ಯಕರ್ತೆಯರು ಮಾಹಿತಿ ಕಲೆಹಾಕಿ ವರದಿ ಸಲ್ಲಿಸಲು ಅನುಕೂಲವಾಗುವಂತೆ ತೇಜಸ್ಕೋ ಟೆಕ್‌ಸಾಫ್ಟ್ ಸಂಸ್ಥೆಯು 'ಮೆಡಿಇನ್ಫೋ ಟ್ಯಾಬ್ ಆರೋಗ್ಯ' ಎಂಬ ಅಪ್ಲಿಕೇಷನ್ ಅಭಿವೃದ್ಧಿ ಪಡಿಸಿದೆ. ''ಗ್ರಾಮೀಣ ಭಾಗಗಳಲ್ಲಿ ಆಶಾ ಕಾರ್ಯಕರ್ತೆಯರು ಅರ್ಜಿಗಳನ್ನು ಕೈಯಲ್ಲಿ ಹಿಡಿದು ಮನೆ ಮನೆಗೂ ತೆರಳಿ ಗರ್ಭಿಣಿಯರು, ನವಜಾತ ಶಿಶುಗಳಿಗೆ ಹಾಕಿಸಲಾದ ಲಸಿಕೆಗಳು ಮುಂತಾದ ವಿಷಯಗಳನ್ನು ಭರ್ತಿ ಮಾಡಿ, ನಂತರ ಆ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ತಲುಪಿಸಬೇಕು. ಹೀಗಾಗಿ ಶೀಘ್ರವಾಗಿ ವರದಿ ಸಲ್ಲಿಸಲು ನೆರವಾಗಲು ಆ್ಯಪ್ ಅಭಿವೃದ್ಧಿಪಡಿಸಲಾಗಿದೆ,'' ಎಂದು 'ಮೆಡಿ ಇನ್ಫೋ ಟ್ಯಾಬ್ ಆರೋಗ್ಯ' ಅಪ್ಲಿಕೇಷನ್ ಬಿಡುಗಡೆ ಮಾಡಿದ ನಂತರ ಸಂಸ್ಥೆಯ ಸಿಇಒ ಎನ್.ಎಸ್.

ಪ್ರಶಾಂತ್ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು. ''ಅಪ್ಲಿಕೇಷನ್‌ನಲ್ಲಿಯೇ ಫಾರಂ ನೀಡುವುದರಿಂದ ಅಲ್ಲಿಯೇ ಮಾಹಿತಿ ತುಂಬಿ, ಜಿಲ್ಲಾಧಿಕಾರಿಗಳಿಗೆ ರವಾನಿಸಬಹುದು. ಶೀಘ್ರವೇ ರವಾನಿಸಲು ಸಹಕಾರಿಯಾಗುವುದಲ್ಲದೆ, ಆಶಾ ಕಾರ್ಯಕರ್ತೆಯರ ಕೆಲಸವೂ ಕಡಿಮೆಯಾಗಲಿದೆ. ಅಪ್ಲಿಕೇಷನ್ ಬಳಸಿಕೊಳ್ಳುವಂತೆ ರಾಜ್ಯ ಸರಕಾರಕ್ಕೆ ಮನವಿಯನ್ನೂ ಮಾಡಲಾಗಿದೆ. ಪ್ರಾಯೋಗಿಕವಾಗಿ ಹಾಸನ ಜಿಲ್ಲೆಯಲ್ಲಿ ಮೆಡಿಇನ್ಫೋ ಟ್ಯಾಬ್' ಅಪ್ಲಿಕೇಷನ್‌ನನ್ನು ಕೆಲ ಆಶಾಕಾರ್ಯಕರ್ತೆಯರು ಬಳಸುತ್ತಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರದ ಗಮನಕ್ಕೂ ತರಲಾಗಿದ್ದು, ಸಚಿವ ಯು.ಟಿ. ಖಾದರ್ ಅವರೊಂದಿಗೆ ಚರ್ಚಿಸಲಾಗಿದೆ,'' ಎಂದರು.

---

# ಮೆಟ್ರೊ ರಂಗೋಲಿ ಕೇಂದ್ರದಲ್ಲಿ ಛಾಯಾಚಿತ್ರ ಪ್ರದರ್ಶನ

ಅಸ್ಸಾಂನ ಗಾರೋಗಳು, ಮಧ್ಯಪ್ರದೇಶದ ಸಹರಿಗಳು ಒಡಿಶಾದ ಕಂದಸ್‌ಗಳು ಪಶ್ಚಿಮ ಬಂಗಾಲದ ಮುಸ್ಲಿಂ ಮಹಿಳೆಯರು, ಚತ್ತೀಸ್‌ಗಡದ ಒರಾನ್ಸ್‌ಗಳು, ಬಿಹಾರ, ಭೋಪಾಲ್‌ನ ಕೊಳೆಗೇರಿಗಳಲ್ಲಿ ವಾಸ ಮಾಡುವ ಮಹಿಳೆಯರು, ಅಲ್ಲಿನ ಆಸ್ಪತ್ರೆಗಳು, ಪಿಎಚ್‌ಸಿಗಳು, ಆಸ್ಪತ್ರೆಗೆ ಹೋಗುವ ದಾರಿಗಳು...ಈ ಎಲ್ಲಾ ಚಿತ್ರಗಳು ಕಂಡುಬಂದದ್ದು ಮೆಟ್ರೊ ರಂಗೋಲಿ ಕೇಂದ್ರದಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಶನಿವಾರ ನಡೆದ 'ಆಟ್ ದಿ ಥ್ರೆಶೋಲ್ಡ್ ಆಫ್ ಲೈಫ್ ಆ್ಯಂಡ್ ಡೆತ್' ಎಂಬ ಛಾಯಾ ಚಿತ್ರಗಳ ಪ್ರದರ್ಶನದಲ್ಲಿ. ಛಾಯಾಚಿತ್ರಗಳ

ಪ್ರದರ್ಶಿಸಿದಲ್ಲಿ ಪೂರ್ವ ಹಾಗೂ ಮಧ್ಯ ಭಾರತದ ಮಹಿಳೆಯರ ಕಥೆಗಳು ಅನಾವರಣಗೊಂಡಿವೆ. ವಿವಿಯ ವಿದ್ಯಾರ್ಥಿಗಳ ಕ್ಯಾಮೆರಾ ಕಣ್ಣಿನಲ್ಲಿ ಎಲ್ಲವೂ ಸೆರೆಯಾಗಿವೆ. ಕಾರ್ಯಕ್ರಮದಲ್ಲಿ ವಿವಿಯ ವಿದ್ಯಾರ್ಥಿಗಳಾದ ಅಶ್ವಿನಿ,ದಾಮಿನಿ, ಗಂಗಾ, ಪಂಕಜ್, ರಂಜಿತ್, ರತ್ನೇಶ್ವರ್, ಸೌಮಿಲ್, ವೃಂದಾ ಮತ್ತು ತುತಲ್ ತೆಗೆದಿರುವ ಚಿತ್ರಗಳನ್ನು ಪ್ರದರ್ಶಿಸಲಾಯಿತು.